# ಹೆಸರಿನಲ್ಲಷ್ಟೇ ಡ್ರ್ಯಾಗನ್!

**ಯೆಮೆನ್ ದೇಶದ ಸೊಕೋಟ್ರ ದ್ವೀಪ ಸಮೂಹ ಹಾಗೂ ಪಶ್ಚಿಮ ಮೊರಾಕ್ಕೋದ ಕೆಲವು ಪ್ರದೇಶಗಳಲ್ಲಿ ಹೆಚ್ಚು ಕಾಣಸುವ 'ಡ್ರ್ಯಾಗನ್ ಬ್ಲಡ್ ಟ್ರೀ'ಗಳು ತಮ್ಮ ವಿಶಿಷ್ಟ ಆಕಾರದಿಂದ ಗಮನಸೆಳೆಯುತ್ತವೆ. ಹೆಸರಿನಲ್ಲಿ ಡ್ರ್ಯಾಗನ್ ಇದ್ದರೂ ಇವು ಮನುಷ್ಯನಿಗೆ ಬಹು ಉಪಯೋಗಿ ವೃಕ್ಷಗಳು.**

■ **ಎಚ್.ಎಸ್. ನಂದಕುಮಾರ್**

ಈ ವಿಶ್ವವು ನಾವು ತಿಳಿದಿರುವುದಕ್ಕಿಂತಲೂ ವಿಚಿತ್ರವಾಗಿರುವುದಷ್ಟೇ ಅಲ್ಲ, ನಾವು ಯೋಚಿಸುವುದಕ್ಕಿಂತಲೂ ವಿಚಿತ್ರವಾಗಿದೆ.

– ವರ್ನರ್ ಹೈಸೆನ್ಬರ್ಗ್ ನೊಬೆಲ್ ಪ್ರಶಸ್ತಿ ಪುರಸ್ಕೃತ ಜರ್ಮನ್ ಭೌತಶಾಸ್ತ್ರಜ್ಞ

ಈ ಜಗತ್ತು ಮೊಗೆದಷ್ಟೂ ಮುಗಿಯದ ಕೌತುಕಗಳ ಆಗರ. ಅಂತಹ ಕೌತುಕಗಳಲ್ಲಿ ಒಂದು 'ಡ್ರ್ಯಾಗನ್ಸ್ ಬ್ಲಡ್ ಟ್ರೀ'.

ಜೀವವಿರುವ ಪ್ರಾಣಿ, ಪಕ್ಷಿ ಹಾಗೂ ಮನುಷ್ಯ ಬದುಕಿರಲು ರಕ್ತ ಬೇಕೇ ಬೇಕು. ಸಸ್ಯ, ಮರಗಳಿಗೂ ಸಹ ಜೀವವಿದೆ. ಆದರೆ ರಕ್ತವಿರುವ ಮರದ ಕುರಿತು ಕೇಳಿದ್ದೀರಾ? ನೋಡಿದ್ದೀರಾ? ಅಂತಹ ಒಂದು ಮರ ಡ್ರ್ಯಾಗನ್ಸ್ ಬ್ಲಡ್ ಟ್ರೀ!

ಈ ಡ್ರ್ಯಾಗನ್ಸ್ ಬ್ಲಡ್ ಟ್ರೀಯ ವಾಸಸ್ಥಾನ, ವಿಶ್ವ ಪಾರಂಪರಿಕ ತಾಣವಾಗಿ 2008ರಲ್ಲಿ ಗುರುತಿಸಲಾದ ಯೆಮೆನ್ ದೇಶದ ಸೊಕೋಟ್ರ ದ್ವೀಪ ಸಮೂಹ ಹಾಗೂ ಪಶ್ಚಿಮ ಮೊರಾಕ್ಕೋದ ಕೆಲವು ಪ್ರದೇಶಗಳು. (ನಮ್ಮ ದೇಶದ ಅಸ್ಸಾಂ ರಾಜ್ಯದ ಪಶ್ಚಿಮ ಕರ್ಬಿ ಆಂಗ್ಲಾಂಗ್‌ನ ಡೋಂಗ್ಕಾ ಸಪ್ರೊ ಪ್ರದೇಶದಲ್ಲಿ ಈ ಮರದ ಒಂದು ಪ್ರಭೇದವಿರುವುದನ್ನು ಅರಣ್ಯಾಧಿಕಾರಿ ಜ್ಯೋತೀಂದ್ರ ಶರ್ಮಾ ನೇತೃತ್ವದ ಮೂವರು ಸಂಶೋಧಕರ ತಂಡ 2019ರಲ್ಲಿ ಪತ್ತೆಹಚ್ಚಿದೆ). ಇದರ ಸಸ್ಯಶಾಸ್ತ್ರೀಯ ಹೆಸರು ಡ್ರಸೀನಾ ಸಿನ್ನಬಾರಿ. ಡ್ರಸೀನಾ ಅಂದರೆ ಗ್ರೀಕ್ ಭಾಷೆಯಲ್ಲಿ ಡ್ರ್ಯಾಗನ್ ಎಂದರ್ಥ. ಈ ಮರವನ್ನು ಕಡಿದಾಗ ರಕ್ತ ಬಣ್ಣದ ರಸ ಹಾಗೂ ರಾಳ ಒಸರುತ್ತದೆ. ಆದ್ದರಿಂದ ಈ ಮರಕ್ಕೆ ಡ್ರ್ಯಾಗನ್ಸ್ ಬ್ಲಡ್ ಟ್ರೀ ಎಂಬ ಹೆಸರು ಬಂದಿದೆ.

ಮರದ ಕಾಂಡದ ತುದಿಯಲ್ಲಿ ಮಾತ್ರ ಛತ್ರಿಯ ಒಳ ಭಾಗದಲ್ಲಿರುವ ತಂತಿಗಳಂತೆ ತೋರುವ ದಟ್ಟವಾದ ರೆಂಬೆ–ಕೊಂಬೆಗಳು ಹಾಗೂ ಅದರ ಮೇಲೆ ನಾಟಿ ಮಾಡಲು ಇಟ್ಟಿರುವ

